# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಜುಲೈ 2025 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 10
ಪುಟ/Pages : 12
ಬೆಲೆ/Price : ₹ 15/-

**Akhila Karnataka Shikshaka Samachar | July 2025 | Monthly**






A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಆತ್ಮೀಯರೇ,

ಭಾರತೀಯರಾದ ನಮ್ಮೆಲ್ಲರಿಗೂ ಗುರುಪೂರ್ಣಿಮೆಯು ಅತ್ಯಂತ ಪವಿತ್ರ ದಿನವಾಗಿದೆ. ಇದನ್ನು ವ್ಯಾಸಪೂರ್ಣಿಮೆ ಎಂದು ಕರೆಯುವರು. ಏಕೆಂದರೆ ಮಹರ್ಷಿ ವೇದವ್ಯಾಸರು ಮಹಾಭಾರತವನ್ನು ರಚಿಸಿದರು ಹಾಗೂ ವೇದಗಳನ್ನು ಸಂಕಲಿಸಿದವರು. ಈ ಮಹತ್ವದ ದಿನದಂದೇ ವೇದವ್ಯಾಸರು ಜನ್ಮತಾಳಿದ್ದು. ಈ ದಿನದಂದು ಗುರುಗಳ ಸ್ಮರಣೆ, ಪೂಜೆ ಮತ್ತು ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಅಂದು ಗುರುಗಳ ಮಹತ್ವದ ಕುರಿತು ಮುಂದಿನ ನಮ್ಮ ಪೀಳಿಗೆಗೆ ಅರಿವನ್ನು ಮೂಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ನಾಗರಪಂಚಮಿ ನಾಡಿಗೆಲ್ಲ ದೊಡ್ಡ ಹಬ್ಬವಾಗಿದ್ದು, ಈ ದಿನದಂದು ಭಕ್ತಿಯಿಂದ ನಾಗರ ಕಲ್ಲಿಗೆ ಅಥವಾ ಹುತ್ತಕ್ಕೆ ಹಾಲೆರೆಯುವುದು ನಮ್ಮ ಭಾರತೀಯ ಸಂಪ್ರದಾಯ. ಅಲ್ಲದೆ ಈ ಹಬ್ಬದಲ್ಲಿ ಸಹೋದರಿಯರು ತಮ್ಮ ಸಹೋದರರ ಆಯಸ್ಸು, ಆರೋಗ್ಯ ಹಾಗೂ ಸಂಪತ್ತು ನೀಡುವಂತೆ ದೇವರಲ್ಲಿ ಪ್ರಾರ್ಥಿಸುತ್ತಾರೆ. ಸಹೋದರರು ಕೂಡ ತಮ್ಮ ಸಹೋದರಿಯರಿಗೆ ಉಡುಗೊರೆ ನೀಡುವ ಪದ್ಧತಿಯೂ ಇದೆ. ಹಿರಿಯರು ಮತ್ತು ಕಿರಿಯರೆಂಬ ಬೇಧವಿಲ್ಲದೆ ಜೋಕಾಲಿ ಆಟ ಆಡುವರು. ಇದು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಾಗಿದೆ.

2025-26ರ ಶೈಕ್ಷಣಿಕ ವರ್ಷವು ಪ್ರಾರಂಭವಾಗಿ ಒಂದು ತಿಂಗಳು ಸಂದಿದೆ. ಇನ್ನೂ ಕೆಲವು ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರೆತಿಲ್ಲದಿರುವುದು ವಿಪರ್ಯಾಸ. ಇದರಿಂದ ಶೈಕ್ಷಣಿಕ ಪ್ರಗತಿಗೆ ಬಾಧಕವಾಗುವುದು. ಶಿಕ್ಷಣ ಇಲಾಖೆಯ ಅಧಿಕಾರಿಗಳು, ಪಠ್ಯಪುಸ್ತಕ ನಿರ್ದೇಶನಾಲಯ ಹಾಗೂ ವಿದ್ಯಾಮಂತ್ರಿಗಳು ಇದರ ಕಡೆಗೆ ಹೆಚ್ಚು ಮುತುವರ್ಜಿ ವಹಿಸಬೇಕು. ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಪಠ್ಯಪುಸ್ತಕಗಳು ದೊರಕುವಂತಾಗಲಿ ಎಂಬ ಮಾಧ್ಯಮಿಕ ಶಿಕ್ಷಕ ಸಂಘದ ಆಗ್ರಹ ಫಲಪ್ರದವಾಗಿದೆ.

2024-25ನೇ ಸಾಲಿನ ನಮ್ಮ ರಾಜ್ಯದ ಎಸ್ಎಸ್ಎಲ್‌ಸಿ ಫಲಿತಾಂಶವು ಸಮಾಧಾನಕರವಾಗಿಲ್ಲ. ಆಯಾ ಶಾಲೆಗಳ ಫಲಿತಾಂಶ ಹಾಗೂ ಶಿಕ್ಷಕರು ಬೋಧಿಸುವ ವಿಷಯಗಳ ಫಲಿತಾಂಶವು ಕುಂಠಿತವಾಗಿದ್ದರೆ, ಆಯಾ ಶಾಲೆಗಳಿಗೆ ನೀಡುವ ಅನುದಾನವನ್ನು ನಿಲ್ಲಿಸುವುದು ಹಾಗೂ ಶಿಕ್ಷಕರ ವಾರ್ಷಿಕ ಬಡ್ತಿ ತಡೆಯುವುದು ಈ ಕ್ರಮಗಳನ್ನು ಕೈಗೊಳ್ಳುವುದು ಎಷ್ಟರಮಟ್ಟಿಗೆ ಸರಿ. ಫಲಿತಾಂಶ ಕುಂಠಿತವಾಗಲು ಶಿಕ್ಷಕರು ಮಾತ್ರ ಹೊಣೆಗಾರರಲ್ಲ, ವಿದ್ಯಾರ್ಥಿಗಳು, ಪೋಷಕರು ಕೂಡ ಜವಾಬ್ದಾರಿಯುತರಾಗಿರುತ್ತಾರೆ. ಸರ್ಕಾರವು ಶಾಲೆಯ ಅನುದಾನ ಹಾಗೂ ಶಿಕ್ಷಕರ ಮೇಲೆ ಮಾತ್ರ ಕೈಗೊಳ್ಳುವ ಕ್ರಮವನ್ನು ತಕ್ಷಣ ನಿಲ್ಲಿಸಬೇಕೆಂದು ಮಾಧ್ಯಮಿಕ ಶಿಕ್ಷಕ ಸಂಘವು ಕೋರುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಗುರು ಪೂರ್ಣಿಮೆ
  – ವಿದ್ವಾನ್ ನಾರಾಯಣ ಭಟ್ಟ 3
- ಅಂತರರಾಷ್ಟ್ರೀಯ ವೈದ್ಯರ ದಿನ
  – ಡಾ॥ ಸಂದೀಪ ಎಸ್. ಸಜ್ಜನ 4
- ಶಿಕ್ಷಕ ಸಂಘದ ವತಿಯಿಂದ ನಾವು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ನಡೆಸಿದ ಒಂದೆರಡು ಕಾರ್ಯಕ್ರಮಗಳ ಕಿರುಪರಿಚಯ
  – ಹೆಚ್. ನಾಗಭೂಷಣ ರಾವ್ 6
- ಎಸ್.ಎಸ್.ಎಲ್.ಸಿ. ಫಲಿತಾಂಶಕ್ಕೆ ಸವಾಲುಗಳು
  – ಚಿದಾನಂದ ಆ ಕೇಸ್ಕರ ಪಾಟೀಲ 7
- ನಾಗರಪಂಚಮಿ – ಲಕ್ಷ್ಮೀಸಿಂಗ್ ಬಿ. 9
- ಶ್ರದ್ಧಾಂಜಲಿ 9
- ಬೀಳ್ಕೊಡುಗೆ ಸಮಾರಂಭ 11
- ಚಿತ್ರಸುದ್ದಿ 12

# ಬೀಳ್ಕೊಡುಗೆ ಸಮಾರಂಭ

## ಶ್ರೀ ನಾರಾಯಣ ಭಟ್ಟ



ಇವರು ಸರ್ಕಾರಿ ಪ್ರೌಢಶಾಲೆ ಸಬ್ ಮಂಗಲ ಆನೇಕಲ್ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆಯ ಮುಖ್ಯ ಶಿಕ್ಷಕರಾಗಿದ್ದು ದಿನಾಂಕ 31–05–2025 ಶನಿವಾರ ವಯೋ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭ ಆನೇಕಲ್ ತಾಲ್ಲೂಕಿನ ಶಿಕ್ಷಣಾಧಿಕಾರಿ ಮಾನ್ಯ ಶ್ರೀ ಎನ್ ವೆಂಕಟೇಶ್ ಅವರ ಉಪಸ್ಥಿತಿಯಲ್ಲಿ ಈ ಭಾವಪೂರ್ಣ ಕಾರ್ಯಕ್ರಮ ಸುಸಂಪನ್ನವಾಯಿತು

ಅವರ ಅನೇಕ ಹಿತೈಷಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು, SDMC ಸದಸ್ಯರು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು, ಪೋಷಕರು ವಿದ್ಯಾರ್ಥಿಗಳು ಸಭೆಯಲ್ಲಿ ಉಪಸ್ಥಿತರಿದ್ದು ಶ್ರೀಯುತರಿಗೆ ಶುಭ ಹಾರೈಸಿದರು.

ಶ್ರೀ ನಾರಾಯಣ ಭಟ್ಟರು ಶಿಕ್ಷಣ ಕ್ಷೇತ್ರದಲ್ಲಿ ಸಹ ಶಿಕ್ಷಕರಾಗಿ, ಮುಖ್ಯಶಿಕ್ಷಕರಾಗಿ ನಿರಂತರ 35 ವರ್ಷಗಳ ಕಾಲ ಅನನ್ಯ ಸೇವೆಯನ್ನು ಸಲ್ಲಿಸಿ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಸಂಘದ ಏಳಿಗೆಗೆ ಶ್ರಮಿಸುತ್ತಿದ್ದಾರೆ. ಸಂಸ್ಕೃತ ಭಾಷೆಗೆ ಶೋಭೆಯನ್ನು ತರುವುದರ ಜೊತೆ ಇಲಾಖೆಯ ವತಿಯಿಂದ ವಯೋನಿವೃತ್ತಿಯನ್ನು ಹೊಂದುತ್ತಿರುವ ನಾರಾಯಣ ಭಟ್ಟರವರಿಗೆ ಉತ್ತಮ ಆರೋಗ್ಯ ಭಾಗ್ಯವನ್ನು ಕರುಣಿಸಿ ಶಿಕ್ಷಣ ರಂಗದಲ್ಲಿ ಅವರ ಅನುಪಮ ಸೇವೆ ಇನ್ನೂ ಹೆಚ್ಚಿನ ವಿಶಿಷ್ಟ ರೀತಿಯಲ್ಲಿ ಸಮಾಜಕ್ಕೆ ಸಿಗುವ ಹಾಗೆ ಭಗವಂತ ಕರುಣಿಸಲಿ. ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕರ ಸಂಘದ ಗೌರವಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀಯುತರ ಸೇವೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ಹೀಗೆ ಮುಂದುವರೆಯಲಿ ಎಂದು ಶುಭವನ್ನು ಕೋರುತ್ತೇವೆ.



## ಶ್ರೀ ಆರ್. ಚನ್ನಕೃಷ್ಣಪ್ಪ

ಇವರು ಶಿಕ್ಷಣ ಕ್ಷೇತ್ರದಲ್ಲಿ ಸಹ ಶಿಕ್ಷಕರಾಗಿ ECO ಆಗಿ ಹಾಗೂ ಸ್ಕೌಟ್ಸ್ ಮತ್ತು ಗೌಡ್ಸ್‌ನಲ್ಲಿ ನೈಪುಣ್ಯತೆ ಹೊಂದಿ ನಿರಂತರ 35 ವರ್ಷಗಳ ಕಾಲ ಅನನ್ಯ ಸೇವೆಯನ್ನು ಸಲ್ಲಿಸಿ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯ ಪದಾಧಿಕಾರಿಗಳಾಗಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಸಂಘದ ಏಳಿಗೆಗೆ ಶ್ರಮಿಸುತ್ತಿದ್ದಾರೆ. ಇಲಾಖೆಯ ವತಿಯಿಂದ ವಯೋನಿವೃತ್ತಿಯನ್ನು ಹೊಂದುತ್ತಿರುವ ಶ್ರೀ ಆರ್ ಚನ್ನಕೃಷ್ಣಪ್ಪನವರಿಗೆ ಉತ್ತಮ ಆರೋಗ್ಯ ಭಾಗ್ಯವನ್ನು ಕರುಣಿಸಿ ಶಿಕ್ಷಣ ರಂಗದಲ್ಲಿ ಅವರ ಅನುಪಮ ಸೇವೆ ಇನ್ನೂ ಹೆಚ್ಚಿನ ವಿಶಿಷ್ಟ ರೀತಿಯಲ್ಲಿ ಸಮಾಜಕ್ಕೆ ಸಿಗುವ ಹಾಗೆ ಭಗವಂತ ಕರುಣಿಸಲಿ. ಶ್ರೀಯುತರ ಸೇವೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ಹೀಗೆ ಮುಂದುವರೆಯಲಿ ಎಂದು ಶುಭವನ್ನು ಕೋರುತ್ತೇವೆ. ಇವರ ವಯೋನಿವೃತ್ತಿಯ ಸಮಾರಂಭದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಖಜಾಂಚಿಗಳಾದ ಶ್ರೀ ಸುರೇಂದ್ರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಪದಾಧಿಕಾರಿಗಳು ಭಾಗವಹಿಸಿ ಶುಭವನ್ನು ಹಾರೈಸಿದರು.

---



## ಅಭಿನಂದನೆಗಳು ಸಿದ್ಧಾರೂಢ ಸಿ. ಪಾಟೀಲ್

ಸಿದ್ಧಾರೂಢ ಸಿ. ಪಾಟೀಲ್ ಎಂಬ ವಿದ್ಯಾರ್ಥಿಯು 2025ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 600 ಅಂಕಗಳಿಸಿ ತೇರ್ಗಡೆಯಾಗಿದ್ದಾನೆ. ಇವನಿಗೆ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ. ಈ ವಿದ್ಯಾರ್ಥಿಯು ಹಲವಾರು ವರ್ಷಗಳಿಂದ ಶಿಕ್ಷಕ ಸಂಘದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರುವ ಕಲ್ಬುರ್ಗಿ ವಿಭಾಗ ಪ್ರಮುಖರಾದ ಶ್ರೀ ಚಂದ್ರಶೇಖರ ಪಾಟೀಲರ ಸುಪುತ್ರ ಎಂದು ತಿಳಿಸಲು ಹೆಮ್ಮೆಯಾಗುತ್ತದೆ.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-07-2025 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ







ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ದಿನಾಂಕ 23–06–2025 ಸೋಮವಾರದಂದು ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶಕ್ಕೆ ಸಂಬಂಧಿಸಿದ ಶಾಲಾ ಶಿಕ್ಷಕರ ವೇತನ ಕಡಿತದ ಆದೇಶವನ್ನು ಶಿಕ್ಷಣ ಇಲಾಖೆಯು ಈ ಕೂಡಲೇ ಹಿಂಪಡೆಯಲು ಸಂಘವು ಅಧಿಕಾರಿಗಳ ಭೇಟಿ ಮಾಡಿ ಆಗ್ರಹಿಸಿತು.

ಇದರ ಜೊತೆಗೆ ರಾಜ್ಯದ ಅನೇಕ ಶಾಲೆಗಳಿಗೆ ಇನ್ನೂ ಪಠ್ಯ ಪುಸ್ತಕಗಳ ವಿತರಣೆ ಆಗಿಲ್ಲ ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸುವಂತೆ ಸಂಬಂಧಿಸಿದ ಅಧಿಕಾರಿಗಳ ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.




ಅಹಮದಾಬಾದ್‌ನಲ್ಲಿ ನಡೆದ ನನ್ನ ಪಾಠಶಾಲಾ ನನ್ನ ತೀರ್ಥ ಕ್ಷೇತ್ರದ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಮ್ಮ ರಾಜ್ಯದ ಪದಾಧಿಕಾರಿಗಳಾದ ಶ್ರೀ ಶ್ರೀಧರ್ ಪಾಟೀಲ್ ಕುಲಕರ್ಣಿ ಮತ್ತು ಶ್ರೀ ರಾಜು.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**
ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

**IF UNDELIVERED PLEASE RETURN TO SENDER**

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com